Test Paper : **II**

Test Subject : **ECONOMICS**

Test Subject Code : **K-0316**

Test Booklet Serial No. : ____________________

OMR Sheet No. : ____________________

Roll No. | | | | | | | | |

(Figures as per admission card)

**Name & Signature of Invigilator/s**

Signature : ____________________

Name : ____________________

**Paper : II**

**Subject : ECONOMICS**

Time : 1 Hour 15 Minutes

Maximum Marks : 100

Number of Pages in this Booklet : **24**

Number of Questions in this Booklet : **50**

### ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

### Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside the Paper I Booklet only**. If you mark at any place other than in the circles in the OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ಅರ್ಥಶಾಸ್ತ್ರ
## ಪೇಪರ್ – II

**ಗಮನಿಸಿ :** ಈ ಪತ್ರಿಕೆಯು **(50) ಐವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಗೆ **ಎರಡು (2)** ಅಂಕಗಳು. ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.

**ಪ್ರಶ್ನೆಸಂಖ್ಯೆ 1 ರಿಂದ 10 :** ಕೆಳಗಿನ ಪ್ರಶ್ನೆಗಳನ್ನು ಓದಿ, ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ನೀಡಿರಿ.

1. ಔದಾಸೀನ್ಯ ರೇಖಾ ವಿಶ್ಲೇಷಣೆಯ ಪ್ರಕಾರ ಗ್ರಾಹಕನ ಸಮತೋಲನವು
   (A) ಗರಿಷ್ಠ ಔದಾಸೀನ್ಯ ರೇಖೆಯಲ್ಲಿರುತ್ತದೆ
   (B) ಕನಿಷ್ಠ ಔದಾಸೀನ್ಯ ರೇಖೆಯಲ್ಲಿರುತ್ತದೆ
   (C) ಔದಾಸೀನ್ಯ ರೇಖೆ ಮತ್ತು ಬಜೆಟ್ ಗೆರೆಗಳು ಸ್ಪರ್ಶಿಸುವ ಬಿಂದುವಿನಲ್ಲಿರುತ್ತದೆ
   (D) ಎರಡು ಔದಾಸೀನ್ಯ ರೇಖೆಗಳು ಛೇದಿಸುವಲ್ಲಿರುತ್ತದೆ

2. ಏಕಸ್ವಾಮ್ಯದಲ್ಲಿ
   (A) ಸೀಮಾಂತ ವೆಚ್ಚ ರೇಖೆಯು ನೀಡಿಕೆ ರೇಖೆಯಾಗಿರುತ್ತದೆ
   (B) ಸೀಮಾಂತ ವೆಚ್ಚ ರೇಖೆಯು ನೀಡಿಕೆ ರೇಖೆಯಾಗಿರುವುದಿಲ್ಲ
   (C) ಸೀಮಾಂತ ವೆಚ್ಚ ರೇಖೆಯು ಪರಿಪೂರ್ಣವಾಗಿ ಸ್ಥಿತಿಸ್ಥಾಪಕವಾಗಿರುತ್ತದೆ
   (D) ಸೀಮಾಂತ ವೆಚ್ಚ ರೇಖೆಯು ಪರಿಪೂರ್ಣವಾಗಿ ಅಸ್ಥಿತಿಸ್ಥಾಪಕವಾಗಿರುತ್ತದೆ

3. ಸ್ವಾಮ್ಯಯುತ ಪೈಪೋಟಿಯ ಮಾರುಕಟ್ಟೆಯಲ್ಲಿ, ಮಾರಾಟಗಾರನಿಗೆ
   (A) ಬೆಲೆಯನ್ನು ಮಾಡುವ (ನಿಗದಿಪಡಿಸುವ) ಅಧಿಕಾರವಿರುವುದಿಲ್ಲ
   (B) ಬೆಲೆಯನ್ನು ನಿಗದಿಪಡಿಸುವ ಅಧಿಕಾರವಷ್ಟೇ ಇರುತ್ತದೆ
   (C) ವಸ್ತು ಪ್ರಭೇದಕ್ಕೆ ಸಂಬಂಧಿಸಿದಂತೆ ಅಧಿಕಾರವಿರುವುದಿಲ್ಲ
   (D) ಬೆಲೆಯನ್ನು ನಿಗದಿಪಡಿಸುವ ಅಧಿಕಾರವಿರುತ್ತದೆ ಮತ್ತು ವಸ್ತು ಪ್ರಭೇದಕ್ಕೆ ಅವಕಾಶವಿರುತ್ತದೆ

4. 'ನೀಡಿಕೆಯು ತನ್ನದೇ ಆದ ಬೇಡಿಕೆಯನ್ನು ಸೃಷ್ಟಿಸುತ್ತದೆ' ಎಂಬುದು
   (A) ಗ್ರೇಶಮ್‌ನ ನಿಯಮ
   (B) ಗಿಫೆನ್‌ನ ನಿಯಮ
   (C) ಸೇಯವರ ನಿಯಮ
   (D) ಗೋಸೆನ್‌ನ ನಿಯಮ

5. ಹಣದ ತಟಸ್ಥತೆಯಿಂದ ಏನು ತಿಳಿಯುತ್ತದೆಂದರೆ ಹಣದ ಬದಲಾವಣೆಯಿಂದ ಯಾವುದರ ಮೇಲೆ ಪ್ರಭಾವ ಬೀರುತ್ತದೆಂದರೆ
   (A) ನಾಮ ಮಾತ್ರ ಚಲಕಗಳು
   (B) ನೈಜ ಚಲಕಗಳು
   (C) ನಾಮ ಮಾತ್ರ ಮತ್ತು ನೈಜ ಚಲಕಗಳು
   (D) ನಾಮ ಮಾತ್ರವೂ ಅಲ್ಲ, ನೈಜವೂ ಅಲ್ಲದ ಚಲಕಗಳು

# ECONOMICS
## Paper – II

**Note :** This paper contains **fifty (50)** objective type questions. **Each** question carries **two (2)** marks. Attempt **all** questions.

**Q. Nos. 1-10 :** Read the following questions and choose the correct answers from the options given below these questions.

**1.** Under the indifference curve analysis the consumer will be in equilibrium

(A) At the highest indifference curve

(B) At the lowest indifference curve

(C) At the point of tangency between the indifference curve and the budget line

(D) At the intersection of two indifference curves

**2.** Under monopoly

(A) Marginal cost curve is the supply curve

(B) Marginal cost curve is not the supply curve

(C) Marginal cost curve is perfectly elastic

(D) Marginal cost curve is perfectly inelastic

**3.** Under the Monopolistic Competitive Market, the seller

(A) Has no discretion to make price

(B) Has discretion only to make price

(C) Has no discretion as regards product differentiation

(D) Has discretion to make price and can differentiate the product

**4.** 'Supply creates its own demand'. This is

(A) Grasham's Law

(B) Giffen's Law

(C) Say's Law

(D) Gossen's Law

**5.** Neutrality of money implies changes in money affect

(A) Nominal variables alone

(B) Real variables alone

(C) Both nominal and real variables

(D) Neither nominal nor real variables

6. ಅಪರಿಮಿತ ಶ್ರಮದ ಪೂರೈಕೆ ಎಂಬ ಸಿದ್ಧಾಂತದ ಪ್ರವರ್ತಕರು
(A) ಸೈಮನ್ ಕುಜ್ನೆಟ್ಸ್
(B) ಎ. ಡಬ್ಲ್ಯೂ. ಲೆವಿಸ್
(C) ಹಾರ್ವೆ ಲೈಬಿನ್‌ಸ್ಟೈನ್
(D) ರಾಗ್ನಾರ್ ನರ್ಕ್ಸ್

7. ಅಸಂತುಲಿತ ಬೆಳವಣಿಗೆ ಎಂಬ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಿದವರು
(A) ಎ. ಒ. ಹ್ರ್‌ಶ್‌ಮನ್
(B) ಆರ್. ರೊಡಾನ್
(C) ಜೋನ್ ರಾಬಿನ್‌ಸನ್
(D) ಡಬ್ಲ್ಯೂ. ಡಬ್ಲ್ಯೂ. ರೋಸ್ಟೊ

8. ಶೂನ್ಯಾಧಾರಿತ ಆಯವ್ಯಯ ಎಂಬುದನ್ನು ಮೊತ್ತಮೊದಲಿಗೆ ಪ್ರಯತ್ನಿಸಿದವರು
(A) ಫಿಲಿಪ್. ಇ. ಟೇಲರ್
(B) ಸಿ. ವಿ. ಬ್ರೌನ್
(C) ಜಿಮ್ಮಿ ಕಾರ್ಟರ್
(D) ಜೇಮ್ಸ್ ಕಟ್

9. ಸದವಕಾಶ ವೆಚ್ಚತತ್ತ್ವದ ರೂಪದಲ್ಲಿ ರಿಕಾರ್ಡೋರವರ ಸಾಪೇಕ್ಷ ವೆಚ್ಚಾನುಕೂಲ ಸಿದ್ಧಾಂತವನ್ನು ಪುನರ್‌ರಚಿಸಿದ ಅರ್ಥಶಾಸ್ತ್ರಜ್ಞರು
(A) ಆ್ಯಡಂ ಸ್ಮಿತ್
(B) ಜೆ. ಎಸ್. ಮಿಲ್
(C) ಜಿ. ವಿ. ಹೆಬರ್‌ಲರ್
(D) ಆಲ್‌ಫ್ರೆಡ್ ಮಾರ್ಷಲ್

10. ಡಬ್ಲ್ಯೂ. ಡಬ್ಲ್ಯೂ. ಲಿಯೋನ್‌ಟಿಫ್‌ರವರು ಪುರಾವೆ ಸಹಿತ ಪರಿಶೀಲಿಸಿದ ಸಿದ್ಧಾಂತವೆಂದರೆ
(A) ನಿರಪೇಕ್ಷ ವೆಚ್ಚಾನುಕೂಲ ಸಿದ್ಧಾಂತ
(B) ಸಾಪೇಕ್ಷ ವೆಚ್ಚಾನುಕೂಲ ಸಿದ್ಧಾಂತ
(C) ಉತ್ಪಾದನಾಂಗ ಅನುಪಾತ ಸಿದ್ಧಾಂತ
(D) ಪರಸ್ಪರ ಬೇಡಿಕೆಯ ಸಿದ್ಧಾಂತ

11. ಮೀನ್, ಮೀಡಿಯನ್ ಮತ್ತು ಮೋಡ್‌ಗಳ ನಡುವಿನ ಸಾಕ್ಷ್ಯಾಧಾರ ಸಹಿತದ ಸಂಬಂಧವು
(A) ಮೀನ್ – ಮೋಡ್ = 3 (ಮೀನ್ – ಮೀಡಿಯನ್)
(B) ಮೀನ್ – ಮೋಡ್ = 2 (ಮೀನ್ – ಮೀಡಿಯನ್)
(C) ಮೋಡ್ – ಮೀನ್ = 3 (ಮೀನ್ – ಮೋಡ್)
(D) ಮೋಡ್ = 3 (ಮೀಡಿಯನ್ – ಮೀನ್)

ಕೆಳಗಿನ ಪ್ರಶ್ನೆಗಳನ್ನು ಓದಿ, ಸರಿಯಾದ ಉತ್ತರವನ್ನು ಕೋಡ್‌ಗಳಿಂದ ಆಯ್ಕೆ ಮಾಡಿರಿ :

12. ಅನುಚಲನಾತ್ಮಕ ವಿತರಣೆಯ ಸಿದ್ಧಾಂತವೆಂದರೆ
I. ಉತ್ಪಾದನಾಂಗಗಳ ಬೆಲೆ ನಿಗದಿ ಪಡಿಸುವ ಸಿದ್ಧಾಂತ
II. ವ್ಯಕ್ತಿಗಳ ಮತ್ತು ಅವರ ಆದಾಯಕ್ಕೆ ಸಂಬಂಧಿಸಿದ ಸಿದ್ಧಾಂತ
III. ಉದ್ಯಮ ಘಟಕಗಳಿಗೆ ಮತ್ತು ಅವುಗಳ ಆದಾಯಕ್ಕೆ ಸಂಬಂಧಿಸಿದ ಸಿದ್ಧಾಂತ
IV. ಮಾರುಕಟ್ಟೆಗಳಿಗೆ ಸಂಬಂಧಿಸಿದ ಸಿದ್ಧಾಂತ

**ಕೋಡ್ಸ್ :**
(A) I ಮತ್ತು IV ಮಾತ್ರ
(B) I ಮಾತ್ರ
(C) II ಮತ್ತು III ಮಾತ್ರ
(D) IV ಮಾತ್ರ

**6.** The theory of unlimited supply of labour was propounded by

(A) Simon Kuznets

(B) A. W. Lewis

(C) Harvey Leibenstien

(D) Ragnar Nurkse

**7.** The concept of unbalanced growth was popularised by

(A) A. O. Hirschman

(B) R. Rodan

(C) Joan Robinson

(D) W. W. Roston

**8.** Zero Base Budget was first tried by

(A) Philip E. Taylor

(B) C. V. Brown

(C) Jimmy Carter

(D) James Cutt

**9.** The economist who reformulated the Ricardian theory of comparative cost advantage in terms of opportunity cost principle is

(A) Adam Smith

(B) J. S. Mill

(C) G. V. Haberler

(D) Alfrad Marshall

**10.** W. W. Leontief has empirically verified the theory of

(A) Absolute cost advantage

(B) Comparative cost advantage

(C) Factor proportions

(D) Reciprocal demand

**11.** The empirical relationship between mean, median and mode is

(A) Mean – Mode = 3 (Mean – Median)

(B) Mean – Mode = 2 (Mean – Median)

(C) Mode – Mean = 3 (Mean – Mode)

(D) Mode = 3 (Median – Mean)

Read the following questions, choose the correct answer from the given codes :

**12.** The theory of functional distribution means

I. Theory of factor pricing

II. Theory related to individuals and their income

III. Theory related to firms and their income

IV. Theory related to markets

**Codes :**

(A) I and IV only

(B) I only

(C) II and III only

(D) IV only

**13.** ಕಲ್ಯಾಣ ಅರ್ಥಶಾಸ್ತ್ರದ ಉದ್ದೇಶವೆಂದರೆ

I. ಕೆಳಗಿನ ಮಟ್ಟದ ಕಲ್ಯಾಣದಿಂದ (W) ಮೇಲಿನ ಮಟ್ಟದ (W*) ಕಲ್ಯಾಣ ಸಾಧನೆಯ ದಾರಿಗಳನ್ನು ಪತ್ತೆ ಹಚ್ಚುವುದು

II. W>W* ರೀತಿಯಲ್ಲಿರುವಂತೆ ದಾರಿಗಳನ್ನು ಹುಡುಕುವುದು

III. W ಮತ್ತು W*ಗಳ ನಡುವೆ ಸಮತೋಲನವನ್ನು ಪುನ: ಸ್ಥಾಪಿಸುವುದು

IV. ವೈಯಕ್ತಿಕ ಆದಾಯವನ್ನು ಖರ್ಚು ಮಾಡುವ ಪರ್ಯಾಯ ದಾರಿಗಳನ್ನು ಪತ್ತೆ ಹಚ್ಚುವುದು

**ಕೋಡ್ಸ್ :**

(A) I ಮತ್ತು III ಮಾತ್ರ

(B) I ಮಾತ್ರ

(C) III ಮತ್ತು IV ಮಾತ್ರ

(D) IV ಮಾತ್ರ

**14.** ಕೆಳಗಿನವುಗಳಲ್ಲಿ ಯಾವುದು/ ಯಾವುವು ಉದ್ಯೋಗದ ಕುರಿತಾದ ಸಾಂಪ್ರದಾಯಿಕ ಸಿದ್ಧಾಂತದ ಊಹೆ/ ಊಹೆಗಳು ?

I. ಪೂರ್ಣ ಉದ್ಯೋಗ

II. ಕೂಲಿ–ಬೆಲೆ ನಮ್ಯತೆ ಇಲ್ಲದಿರುವುದು

III. ಪರಿಪೂರ್ಣ ಪೈಪೋಟಿ

IV. ಹಣದ ತಟಸ್ಥತೆ

**ಕೋಡ್ಸ್ :**

(A) I ಮಾತ್ರ

(B) II ಮಾತ್ರ

(C) I ಮತ್ತು III ಮಾತ್ರ

(D) I, III ಮತ್ತು IV ಮಾತ್ರ

**15.** ಒಳಗೊಳ್ಳುವಿಕೆಯ ಬೆಳವಣಿಗೆ ಕುರಿತಂತೆ ಕೆಳಗಿನ ಹೇಳಿಕೆಗಳನ್ನು ಗಮನಿಸಿ ಕೋಡ್‌ಗಳ ಸಹಾಯದಿಂದ ಸರಿಯಾದುದನ್ನು ಆಯ್ಕೆ ಮಾಡಿರಿ

I. ಒಳಗೊಳ್ಳುವಿಕೆಯ ಬೆಳವಣಿಗೆ ಎಂಬ ಅಂಶವನ್ನು 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಯಿತು

II. ಒಳಗೊಳ್ಳುವಿಕೆಯ ಬೆಳವಣಿಗೆ ಎಂಬುದು ಆರ್ಥಿಕ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯನ್ನು ಗಮನಕ್ಕೆ ತೆಗೆದು ಕೊಳ್ಳುತ್ತದೆ

III. ಒಳಗೊಳ್ಳುವಿಕೆಯ ಬೆಳವಣಿಗೆ ಮುಖ್ಯ ಅಂಶವೆಂದರೆ ದೇಶದ ಒಟ್ಟಾರೆ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪ್ರತಿಯೊಂದು ವಲಯವನ್ನೂ ಸೇರಿಸಿಕೊಳ್ಳುವುದು

IV. ಒಳಗೊಳ್ಳುವಿಕೆಯ ಬೆಳವಣಿಗೆ ಎಂಬುದು ಮೂರನೆಯ ಜನಾಂಗದ ಆರ್ಥಿಕ ಸುಧಾರಣೆಗಳ ಸಮಾನಾಂತರವಾಗಿ ಸಾಗುತ್ತಿದೆ

**ಕೋಡ್ಸ್ :**

(A) I, II, III ಮತ್ತು IV

(B) I ಮತ್ತು II ಮಾತ್ರ

(C) I, II ಮತ್ತು III ಮಾತ್ರ

(D) II, III ಮತ್ತು IV ಮಾತ್ರ

**16.** ಲಿಯೋನ್‌ಟಿಫ್‌ರವರ ಸ್ಥಬ್ದ ಹೂಡುವಳಿ–ಹುಟ್ಟುವಳಿ ಮಾದರಿಯ ಊಹೆಗಳಲ್ಲಿ ಕೆಳಗಿನವುಗಳು ಯಾವುವು ?

I. ಹುಟ್ಟುವಳಿಗಳ ನಡುವೆ ಪ್ರತಿನಿಧಾನವಿರುವುದಿಲ್ಲ

II. ರೇಖೀಯ ಏಕರೂಪದ ಉತ್ಪಾದನಾ ಅನುಚಲನೆ ಇರುತ್ತದೆ

III. ಪ್ರತಿಯೊಂದು ಕೈಗಾರಿಕೆಯು ಕೇವಲ ಒಂದೇ ಒಂದು ಏಕರೂಪದ ಉತ್ಪನ್ನವನ್ನು ಉತ್ಪಾದಿಸುತ್ತದೆ

IV. ಉತ್ಪಾದನೆಯಲ್ಲಿ ಮಿತವ್ಯಯದ ಸಾಧನೆ ಇರುತ್ತದೆ

**ಕೋಡ್ಸ್ :**

(A) I, II, IV ಮಾತ್ರ

(B) II ಮತ್ತು III ಮಾತ್ರ

(C) I, II ಮತ್ತು III ಮಾತ್ರ

(D) III ಮತ್ತು IV ಮಾತ್ರ

**13.** The objective of Welfare Economics is

I. To identify the ways and means to attain the higher level of welfare (W*) from the lower level of welfare (W)

II. To find out the ways and means to maintain W>W*

III. To restore equilibrium between W and W*

IV. To identify alternative ways of spending personal income

**Codes :**

(A) I and III only

(B) I only

(C) III and IV only

(D) IV only

**14.** Which of the following is/are the assumptions of the classical theory of employment ?

I. Full employment

II. Wage-price inflexibility

III. Perfect competition

IV. Neutrality of money

**Codes :**

(A) I only

(B) II only

(C) I and III only

(D) I, III and IV only

**15.** Consider the following statements about the idea of 'Inclusive growth' and select the correct one using the codes

I. The idea of inclusive growth was included in the $11^{th}$ five year plan

II. Inclusive growth takes into account both the economic and social inclusion

III. The main idea behind inclusive growth is to include every sector in the country's overall development process

IV. The third generation of economic reforms runs parallel to the idea of inclusive growth

**Codes :**

(A) I, II, III and IV

(B) I and II only

(C) I, II and III only

(D) II, III and IV only

**16.** Which of the following are the assumptions of Leontief's static Input-Output model ?

I. There is no substitution between inputs

II. There is liner homogeneous production function

III. Each industry produces only one homogeneous product

IV. There are economics of scale in production

**Codes :**

(A) I, II, IV only

(B) II and III only

(C) I, II and III only

(D) III and IV only

17. ಮೌಲ್ಯವರ್ಧಿತ ತೆರಿಗೆ (ವ್ಯಾಟ್) ರೂಪಗಳಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ

I. ಪ್ರಥಮ ವಿಧವು ಉತ್ಪಾದನಾ ವ್ಯಾಟ್

II. ಎರಡನೆಯ ವಿಧವು ಅನುಭೋಗ ವ್ಯಾಟ್

III. ಮೂರನೆಯ ವಿಧವು ಕೂಲಿ–ರೂಪದ ವ್ಯಾಟ್

IV. ನಾಲ್ಕನೆಯ ವಿಧವು ಆದಾಯ–ರೂಪದ ವ್ಯಾಟ್

ಕೆಳಗಿನ ಕೋಡ್‌ಗಳ ಸಹಾಯದಿಂದ ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಆಯ್ಕೆ ಮಾಡಿರಿ :

**ಕೋಡ್ಸ್ :**

(A) I ಮಾತ್ರ

(B) I ಮತ್ತು II ಮಾತ್ರ

(C) I, II ಮತ್ತು III ಮಾತ್ರ

(D) I, II, III ಮತ್ತು IV

18. ಕೆಳಗಿನ ಹೇಳಿಕೆಗಳನ್ನು ಗಮನಿಸಿರಿ :

I. ಭಾರತದ ನೀತಿ ಆಯೋಗದ ಕಾರ್ಯಕಾರಿ ಸಮಿತಿಯಲ್ಲಿ ಎರಡು ಸದಸ್ಯರಿರುತ್ತಾರೆ

II. ನೀತಿ ಆಯೋಗವು ಎಲ್ಲಾ ರಾಜ್ಯಗಳ/ ಕೇಂದ್ರಾಡಳಿತಗಳ ಮುಖ್ಯ ಮಂತ್ರಿಗಳನ್ನು ಸದಸ್ಯರನ್ನಾಗಿ ಹೊಂದಿದೆ

III. ನೀತಿ ಆಯೋಗವು ಎಲ್ಲಾ ರಾಜ್ಯಗಳ ರಾಜ್ಯಪಾಲರುಗಳನ್ನು ಸದಸ್ಯರನ್ನಾಗಿ ಹೊಂದಿದೆ

IV. ನೀತಿ ಆಯೋಗದಲ್ಲಿ ಕೇಂದ್ರ ಸಂಪುಟದ ಸಚಿವರು ಸದಸ್ಯರಾಗಿರುತ್ತಾರೆ

ಕೋಡ್‌ಗಳ ಸಹಾಯದಿಂದ ಸರಿಯಾದುದನ್ನು ಆಯ್ಕೆ ಮಾಡಿರಿ :

**ಕೋಡ್ಸ್ :**

(A) I ಮಾತ್ರ

(B) I ಮತ್ತು II ಮಾತ್ರ

(C) I, II ಮತ್ತು III ಮಾತ್ರ

(D) I, II, III ಮತ್ತು IV

19. ಕ್ರುಗ್‌ಮನ್ ನಿಯೋ–ಚೇಂಬರ್‌ಲಿನ್ ವ್ಯಾಪಾರ ಸಿದ್ಧಾಂತದ ಊಹೆಗಳಲ್ಲಿ ಕೆಳಗಿನವು ಯಾವುವು ?

I. ಅರ್ಥವ್ಯವಸ್ಥೆಯಲ್ಲಿ ಏಕರೂಪದ ಒಂದೇ ಒಂದು ಉತ್ಪಾದನಾಂಗವಿರುತ್ತದೆ, ಅದು ಶ್ರಮ

II. ಶ್ರಮದ ಪೂರೈಕೆಯು ಸ್ಥಿರವಾಗಿರುತ್ತದೆ

III. ಉತ್ಪನ್ನಗಳು ಸಮತಲವಾಗಿ ವಿಭಿನ್ನವಾಗಿರುತ್ತವೆ

IV. ಉತ್ಪನ್ನಗಳು ಲಂಬರೂಪದಲ್ಲಿ (ವಾಲದ) ವಿಭಿನ್ನವಾಗಿರುತ್ತದೆ

**ಕೋಡ್ಸ್ :**

(A) I ಮತ್ತು II ಮಾತ್ರ

(B) II ಮತ್ತು III ಮಾತ್ರ

(C) II ಮತ್ತು IV ಮಾತ್ರ

(D) I, II ಮತ್ತು III ಮಾತ್ರ

20. Z ಪರೀಕ್ಷೆಯ ಉಪಯೋಗವು (ಪ್ರಯೋಗವು) ಕಂಡು ಬರುವುದು ಕೇವಲ

I. ಸಾಮಾನ್ಯ ಜನಸಂಖ್ಯೆಯ ನಮೂನೆಯಲ್ಲಿ

II. F ವಿತರಣೆಯ ನಮೂನೆಯಲ್ಲಿ

III. ದೊಡ್ಡದಾದ ನಮೂನೆಗಳಲ್ಲಿ

IV. ಪಾಯಿಸನ್ ವಿತರಣೆಯ ನಮೂನೆಗಳಲ್ಲಿ

**ಕೋಡ್ಸ್ :**

(A) I ಮತ್ತು III ಮಾತ್ರ

(B) I ಮತ್ತು II ಮಾತ್ರ

(C) II ಮತ್ತು III ಮಾತ್ರ

(D) I ಮತ್ತು IV ಮಾತ್ರ

**17.** Consider the following statements regarding the forms of VAT

I. The first variety is the production VAT

II. The second variety is the consumption VAT

III. The third variety is wage-type VAT

IV. The fourth variety is Income-type VAT

Select the correct statement/s using the code/s :

**Codes :**

(A) I only

(B) I and II only

(C) I, II and III only

(D) I, II, III and IV

**18.** Consider the following statements

I. NITI Aayog of India comprises two members in the executive committee

II. NITI Aayog comprises the Chief Ministers of all States/UTs as its members

III. NITI Aayog comprises the Governors of all the States

IV. NITI comprises the Union Cabinet Ministers as its members

Select the correct one using the code/s :

**Codes :**

(A) I only

(B) I and II only

(C) I, II and III only

(D) I, II, III and IV

**19.** Which of the following are the assumptions of Krugman's Neo-Chamberlin Trade model ?

I. The economy has only one homogeneous factor of production, namely, the labour

II. The supply of labour is fixed

III. The products are horizontally differentiated

IV. The products are vertically differentiated

**Codes :**

(A) I and II only

(B) II and III only

(C) II and IV only

(D) I, II and III only

**20.** Z test holds good only for

I. Sample from normal population

II. Sample from F distribution

III. Large samples

IV. Samples for Poisson distribution

**Codes :**

(A) I and III only

(B) I and II only

(C) II and III only

(D) I and IV only

ಕೆಳಗಿನ ಪ್ರಶ್ನೆಗಳನ್ನು ಓದಿ, ಸರಿಯಾದ ಪ್ರತಿಪಾದನೆ ಹಾಗೂ ಕಾರಣದ ಸಂಯೋಜನೆಯನ್ನು ನೀಡಿದ ಕೋಡ್‌ಗಳಿಂದ ಆಯ್ಕೆ ಮಾಡಿರಿ :

**21. ಪ್ರತಿಪಾದನೆ (A)** : ಉತ್ಪಾದನಾಂಗಗಳ ಬೆಲೆಗಳಲ್ಲಿ ಅತ್ಯಲ್ಪ ಇಳಿಕೆಯಾದರೆ, ಉದ್ಯಮ ಘಟಕಗಳು ಬೆಲೆಗಳನ್ನು ವಿಚಲಿಸುವುದಿಲ್ಲ

**ಕಾರಣ (R)** : ಬೆಲೆ ಸಮರದ ಭಯದಿಂದಾಗಿ ಉದ್ಯಮ ಘಟಕಗಳು ಗೊತ್ತು ಪಡಿಸಿದ ಬೆಲೆಯಲ್ಲಿ ಗುಣಮಟ್ಟದ, ಹೆಚ್ಚಿನ ಪರಿಣಾಮದ ಸರಕುಗಳನ್ನು ನೀಡಿ ಗ್ರಾಹಕರಿಗೆ ಬೆಲೆ ಇಳಿಕೆಯ ಲಾಭವನ್ನು ಹಸ್ತಾಂತರಿಸುತ್ತದೆ

**ಕೋಡ್ಸ್ :**

(A) (A) ಮತ್ತು (R) ಗಳೆರಡೂ ಸರಿಯಲ್ಲ

(B) (A) ಯು ಸರಿ, ಆದರೆ (R) (A) ಯ ಸರಿಯಾದ ವಿವರಣೆಯಲ್ಲ

(C) (R) ಸರಿ, (A) ಯು ಸರಿಯಲ್ಲ

(D) (A) ಮತ್ತು (R) ಗಳೆರಡೂ ಸರಿ, (R) (A) ಯ ಸರಿಯಾದ ವಿವರಣೆಯಾಗಿರುತ್ತದೆ

**22. ಪ್ರತಿಪಾದನೆ (A)** : ವಿವೇಕಿಯಾದ ಉತ್ಪಾದಕನು ಯಾವತ್ತೂ ರಿಡ್ಜ್‌ಗೆರೆಗಳ ನಡುವೆಯೇ ಉತ್ಪಾದಿಸುತ್ತಾನೆ

**ಕಾರಣ (R)** : ರಿಡ್ಜ್‌ಗೆರೆಗಳ ಆಚೆಗೆ (ಈಚೆಗೆ) ಉತ್ಪಾದನಾಂಗಗಳ ಸೀಮಾಂತ ಉತ್ಪನ್ನವು ಋಣಾತ್ಮಕವಾಗಿರುತ್ತದೆ

**ಕೋಡ್ಸ್ :**

(A) (A) ಯು ಸರಿ, (R) ಸರಿಯಲ್ಲ

(B) (R) ಸರಿ, (A) ಯು ಸರಿಯಲ್ಲ

(C) (A) ಮತ್ತು (R) ಗಳೆರಡೂ ಸರಿ, (R) (A) ಯ ಸರಿಯಾದ ವಿವರಣೆಯಲ್ಲ

(D) (A) ಮತ್ತು (R) ಗಳೆರಡೂ ಸರಿ, (R) (A) ಯ ಸರಿಯಾದ ವಿವರಣೆಯಾಗಿರುತ್ತದೆ

**23. ಪ್ರತಿಪಾದನೆ (A)** : ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಹಣದ ಸಟ್ಟಾರೂಪದ ಬೇಡಿಕೆಯು ಪರಿಪೂರ್ಣವಾಗಿ ಸ್ಥಿತಿಸ್ಥಾಪಕವಾಗಿರುತ್ತದೆ

**ಕಾರಣ (R)** : ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಜನರು ಗಳಿಸುವ ಬಡ್ಡಿ ಆದಾಯವು ಕಡಿಮೆ ಇರುತ್ತದೆ ಮತ್ತು ಬಂಡವಾಳದ ನಷ್ಟವನ್ನು ನಿರೀಕ್ಷಿಸುತ್ತಾರೆ

**ಕೋಡ್ಸ್ :**

(A) (A) ಯು ಸರಿ, (R) ಸರಿಯಲ್ಲ

(B) (R) ಸರಿ, (A) ಯು ಸರಿಯಲ್ಲ

(C) (A) ಮತ್ತು (R) ಗಳೆರಡೂ ಸರಿ, (R) (A) ಯ ಸರಿಯಾದ ವಿವರಣೆಯಾಗಿರುತ್ತದೆ

(D) (A) ಮತ್ತು (R) ಗಳೆರಡೂ ಸರಿಯಲ್ಲ

**24. ಪ್ರತಿಪಾದನೆ (A)** : ಹಣದ ಬೇಡಿಕೆಗೆ ಸಂಬಂಧಿಸಿದಂತೆ ಬಮಲ್‌ರವರು ಸ್ಕ್ವೇರ್ ರೂಟ್ ನಿಯಮವನ್ನು ನಿಷ್ಪನ್ನಗೊಳಿಸಿದರು

**ಕಾರಣ (R)** : ಹಣದ ವ್ಯಾವಹಾರಿಕ ಬೇಡಿಕೆಯು ಬಡ್ಡಿದರಕ್ಕೆ ಸಂಬಂಧಿಸಿದಂತೆ ಸಂವೇದನಾಶೀಲವಾಗಿರುತ್ತದೆಂದು ಬಮಲ್‌ರವರು ತೋರಿಸಿದರು

**ಕೋಡ್ಸ್ :**

(A) (A) ಯು ಸರಿ, (R) (A) ಯ ಸರಿಯಾದ ವಿವರಣೆಯಲ್ಲ

(B) (A) ಮತ್ತು (R) ಗಳೆರಡೂ ಸರಿಯಲ್ಲ

(C) (A) ಯು ಸರಿ, (R) ಸರಿಯಲ್ಲ

(D) (A) ಯು ಸರಿಯಲ್ಲ, (R) ಸರಿ

Read the following questions and select the right combination of Assertion (**A**) and Reason (**R**) from the codes given below :

21. **Assertion (A)** : If there is a minor decrease in factor prices, firms will not disturb the price.

    **Reason (R)** : The firms, afraid of triggering a price war, would pass on the benefit of cost reduction to the customers through improved quality or increased quantity at the given price

    **Codes :**

    (A) Both (A) and (R) are incorrect

    (B) (A) is correct but (R) is incorrect explanation of (A)

    (C) (R) is correct, (A) is incorrect

    (D) Both (A) and (R) are correct, (R) is the correct explanation of (A)

22. **Assertion (A)** : A rational producer would always produce between the ridge lines

    **Reason (R)** : Beyond the ridge lines the marginal products of factors would be negative

    **Codes :**

    (A) (A) is correct, (R) is incorrect

    (B) (R) is correct, (A) is incorrect

    (C) Both (A) and (R) are correct, (R) is not the correct explanation of (A)

    (D) Both (A) and (R) are correct, (R) is the correct explanation of (A)

23. **Assertion (A)** : The speculative demand for money becomes perfectly elastic at very low rates of interest

    **Reason (R)** : At very low rates of interest, people get less interest income and expect capital loss

    **Codes :**

    (A) (A) is correct, (R) is incorrect

    (B) (R) is correct, (A) is incorrect

    (C) Both (A) and (R) are correct, (R) is the correct explanation of (A)

    (D) Both (A) and (R) are incorrect

24. **Assertion (A)** : Baumol has derived 'Square-root Rule' of demand for money.

    **Reason (R)** : Baumol has shown that the transaction demand for money is sensitive to the rate of interest

    **Codes :**

    (A) (A) is correct, (R) is not the correct explanation of (A)

    (B) Both (A) and (R) are incorrect

    (C) (A) is correct, (R) is incorrect

    (D) (A) is incorrect, (R) is correct

**25.** **ಪ್ರತಿಪಾದನೆ (A)** : ಆರ್ಥಿಕ ಬೆಳವಣಿಗೆಯು ಒಂದು ಕೊನೆ ಎಂದು ಪರಿಭಾವಿಸಲಾಗದು

**ಕಾರಣ (R)** : ಯಾವತ್ತೂ ಆರ್ಥಿಕ ಬೆಳವಣಿಗೆಯು ಜನರ ಜೀವನ ಮತ್ತು ಸ್ವಾತಂತ್ರ್ಯಗಳನ್ನು ಹೆಚ್ಚಿಸುವಂತಿರಬೇಕು

**ಕೋಡ್ಸ್ :**

(A) (A) ಯು ಸರಿ, (R) ಸರಿ, (R) (A) ಯ ಸರಿಯಾದ ವಿವರಣೆಯಲ್ಲ

(B) (A) ಯು ಸರಿ, (R) ಕೂಡಾ ಸರಿ, (R) (A) ಯ ಸರಿಯಾದ ವಿವರಣೆಯಾಗಿರುತ್ತದೆ

(C) (A) ಮತ್ತು (R) ಗಳೆರಡೂ ಸರಿಯಲ್ಲ

(D) (A) ಯು ಸರಿ, (R) ಸರಿಯಲ್ಲ

**26.** **ಪ್ರತಿಪಾದನೆ (A)** : ತೆರಿಗೆಯ ಕ್ಷೇತ್ರದಲ್ಲಿ ಪಾವತಿಸುವ ಸಾಮರ್ಥ್ಯ ಎಂಬ ತತ್ತ್ವವು ಸಮರ್ಥನೀಯವಾಗಿದೆ

**ಕಾರಣ (R)** : ಆದಾಯವು ಹೆಚ್ಚಿದಂತೆ ಆದಾಯ ಹೆಚ್ಚಳದಿಂದಾದ ಸೀಮಾಂತ ತುಷ್ಟಿಗುಣವು ಹೆಚ್ಚುತ್ತದೆ

**ಕೋಡ್ಸ್ :**

(A) (A) ಮತ್ತು (R) ಗಳೆರಡೂ ಸರಿಯಲ್ಲ

(B) (R) ಸರಿ, (A) ಯು ಸರಿಯಲ್ಲ

(C) (A) ಯು ಸರಿ,(R) (A) ಯ ಸರಿಯಾದ ವಿವರಣೆಯಲ್ಲ

(D) (A) ಮತ್ತು (R) ಗಳೆರಡೂ ಸರಿ

**27.** **ಪ್ರತಿಪಾದನೆ (A)** : ಹ್ಯಾನ್ಸ್ ಸಿಂಗರ್ ಮತ್ತು ರಾಲ್ ಪ್ರೆಬಿಶ್ ಪ್ರಕಾರ ದೀರ್ಘಾವಧಿಯಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ವ್ಯಾಪಾರದ ಕರಾರುಗಳು ಕ್ಷೀಣಿಸುತ್ತವೆ

**ಕಾರಣ (R)** : ಕಡಿಮೆ ಬೆಲೆ ಮತ್ತು ಆದಾಯ ಸ್ಥಿತಿ ಸ್ಥಾಪಕತ್ವವುಳ್ಳ (ಬೇಡಿಕೆಯ) ತಯಾರಿಕಾ ಸರಕುಗಳನ್ನು (ಉತ್ಪನ್ನಗಳನ್ನು) ಅಭಿವೃದ್ಧಿಶೀಲ ರಾಷ್ಟ್ರಗಳು ರಫ್ತು ಮಾಡುತ್ತವೆ

**ಕೋಡ್ಸ್ :**

(A) (A) ಮತ್ತು (R) ಗಳೆರಡೂ ಸರಿ

(B) (A) ಮತ್ತು (R) ಗಳೆರಡೂ ಸರಿ, (R) (A) ಯ ಸರಿಯಾದ ವಿವರಣೆಯಾಗಿರುತ್ತದೆ

(C) (A) ಮತ್ತು (R) ಗಳೆರಡೂ ಸರಿಯಲ್ಲ

(D) (A) ಯು ಸರಿ, (R) (A) ಯ ಸರಿಯಾದ ವಿವರಣೆಯಲ್ಲ

**28.** **ಪ್ರತಿಪಾದನೆ (A)** : ಕೊರತೆಯನ್ನು ಎದುರಿಸುತ್ತಿರುವ ದೇಶದ ನಾಣ್ಯದ ಅಪಮೌಲ್ಯವು ಆಂತರಿಕ ಹೀರಿಕೆಯನ್ನು ಕುಗ್ಗಿಸುತ್ತದೆ

**ಕಾರಣ (R)** : ನಾಣ್ಯದ ಅಪಮೌಲ್ಯವು ಆದಾಯದ ಪುನರ್ ಹಂಚಿಕೆಯನ್ನು ಕೂಲಿಯನ್ನು ಪಡೆಯುವವರಿಂದ ಲಾಭವನ್ನು ಪಡೆಯುವವರ ಪರವಾಗಿ ಮಾಡುತ್ತದೆ

**ಕೋಡ್ಸ್ :**

(A) (A) ಮತ್ತು (R) ಗಳೆರಡೂ ಸರಿ, (R) (A) ಯ ಸರಿಯಾದ ವಿವರಣೆಯಾಗಿರುತ್ತದೆ

(B) (A) ಮತ್ತು (R) ಗಳೆರಡೂ ಸರಿ, (R) (A) ಯ ಸರಿಯಾದ ವಿವರಣೆಯಲ್ಲ

(C) (A) ಯು ಸರಿ,(R) ಸರಿಯಲ್ಲ

(D) (A) ಯು ಸರಿಯಲ್ಲ,(R) ಸರಿ

25. **Assertion (A)** : Economic growth cannot be sensibly treated as an end in itself.

**Reason (R)** : Economic growth should always enhance the lives and freedoms of the people

**Codes :**

(A) (A) is correct, (R) is correct, (R) is not the correct explanation of (A)

(B) (A) is correct, (R) is also correct, (R) is the correct explanation of (A)

(C) Both (A) and (R) are incorrect

(D) (A) is correct, (R) is incorrect

26. **Assertion (A)** : The principle of ability to pay is justified in the taxation domain

**Reason (R)** : As income increases the marginal utility of the additional unit of income increases

**Codes :**

(A) Both (A) and (R) are incorrect

(B) (R) is correct, (A) is incorrect

(C) (A) is correct but (R) is not the correct explanation of (A)

(D) Both (A) and (R) are correct

27. **Assertion (A)** : According to Hans Singer and Raul Prebisch, the terms of trade of developing countries deteriorate in the long run

**Reason (R)** : The developing countries export manufactured products which have low price and income elasticities of demand

**Codes :**

(A) Both (A) and (R) are correct

(B) Both (A) and (R) are correct, (R) is the correct explanation of (A)

(C) Both (A) and (R) are incorrect

(D) (A) is correct, (R) is not the correct explanation of (A)

28. **Assertion (A)** : Devaluation of currency of a deficit nation reduces the domestic absorption

**Reason (R)** : Devaluation redistributes income from wage earners to profit earners

**Codes :**

(A) Both (A) and (R) are correct, (R) is the correct explanation of (A)

(B) Both (A) and (R) are correct, (R) is not the correct explanation of (A)

(C) (A) is correct, (R) is incorrect

(D) (A) is incorrect, (R) is correct

**29.** **ಪ್ರತಿಪಾದನೆ (A) :** ರಿಗ್ರೆಶನ್ ಸಮೀಕರಣದಲ್ಲಿ ಬಲಬದಿಯ ಚಲಕವನ್ನು ವಿವರಿಸಲ್ಪಟ್ಟ ಚಲಕವೆಂದು ಕರೆಯುತ್ತಾರೆ

**ಕಾರಣ (R) :** ವಿವರಣಾಯೋಗ್ಯ ಚಲಕವು ವಿವರಿಸಲ್ಪಟ್ಟ ಚಲಕದ ಬದಲಾವಣೆಯನ್ನು ವಿವರಿಸುತ್ತದೆ

**ಕೋಡ್ಸ್ :**

(A) (A) ಮತ್ತು (R) ಗಳೆರಡೂ ಸರಿಯಲ್ಲ

(B) (A) ಯು ಸರಿಯಲ್ಲ, (R) ಸರಿ

(C) (A) ಮತ್ತು (R) ಗಳೆರಡೂ ಸರಿ

(D) (R) ಸರಿಯಲ್ಲ, (A) ಯು ಸರಿ

**30.** ಕೆಳಗಿನ ದ್ವಿಜನ ಸ್ವಾಮ್ಯ ಮಾದರಿಗಳ ಅನುಕ್ರಮತೆಯನ್ನು ಗುರುತಿಸಿರಿ

I. ಕೋರ್‌ನೋಟ್ ಮಾದರಿ

II. ಸ್ಟೇಕಲ್‌ಬರ್ಗ್ ಮಾದರಿ

III. ಬರ್‌ಟ್ರಾನ್ಡ್ ಮಾದರಿ

IV. ಪೌಲ್ ಸ್ವೀಝೀ ಮಾದರಿ

**ಕೋಡ್ಸ್ :**

(A) I, II, III, IV

(B) IV, III, II, I

(C) III, I, IV, II

(D) III, I, II, IV

**31.** MC = AC ಎಂದಿರುವಾಗ ಕೆಳಗಿನ ವೆಚ್ಚಗಳನ್ನು ಪ್ರಮಾಣಕ್ಕೆ ತಕ್ಕಂತೆ ಕೆಳಗಿನಿಂದ ಮೇಲೆ ಎಂಬ ಕ್ರಮದಂತೆ ಅಣಿಗೊಳಿಸಿರಿ

I. ಸರಾಸರಿ ಚಲಕ ವೆಚ್ಚ (AVC)

II. ಸರಾಸರಿ ವೆಚ್ಚ (AC)

III. ಸರಾಸರಿ ಸ್ಥಿರ ವೆಚ್ಚ (AFC)

**ಕೋಡ್ಸ್ :**

(A) III, I, II

(B) I, II, III

(C) III, II, I

(D) II, I, III

**32.** ಗುಣಕ ಮತ್ತು ವೇಗೋತ್ಕರ್ಷಗಳ ಸಂವಾದಿಯ ಪ್ರಕ್ರಿಯೆಯನ್ನು ಕ್ರಮಾನುಗತವಾಗಿ ಅಣಿಗೊಳಿಸಿರಿ

I. ಗುಣಕದ ಮೂಲಕ ಆದಾಯದ ಏರಿಕೆ

II. ಸ್ವಯಂಚಾಲಿತ ಹೂಡಿಕೆಯಲ್ಲಿ ಏರಿಕೆ

III. ವೇಗೋತ್ಕರ್ಷದ ಮೂಲಕ ಪ್ರಚೋದಿತ ಹೂಡಿಕೆಯಲ್ಲಿ ಏರಿಕೆ

IV. ಹೆಚ್ಚು ಪ್ರಮಾಣದಲ್ಲಿ ಒಟ್ಟು ಬೇಡಿಕೆ ಮತ್ತು ಆದಾಯದಲ್ಲಿ ಏರಿಕೆ

**ಕೋಡ್ಸ್ :**

(A) I, II, III, IV

(B) II, I, III, IV

(C) IV, III, II, I

(D) III, IV, I, II

**33.** ಕೋಡ್‌ಗಳ ಸಹಾಯದಿಂದ ಕೆಳಗಿನ ಕೊಡುಗೆಗಳನ್ನು ಕ್ರಮಾನುಗತವಾಗಿ ಅಣಿಗೊಳಿಸಿರಿ

I. ಸೈಮನ್ ಕುಜ್ನೆಟ್ಸ್‌ರವರ ಇನ್‌ವರ್ಟ್ U ಆಕಾರದ ಪ್ರಮೇಯ

II. ಜೆ. ಎ. ಷುಂಪಿಟರ್‌ರವರ ಥಿಯರಿ ಆಫ್ ಇಕೊನೊಮಿಕ್ ಗ್ರೋತ್

III. ಇ. ಎಸ್. ಫೆಲ್ಪ್ಸ್‌ರವರ ಗೋಲ್ಡನ್ ರೂಲ್ ಆಫ್ ಅಕ್ಯುಮ್ಯುಲೇಶನ್

IV. ಕೆ. ಜೆ. ಏರೋರವರ ಲರ್ನಿಂಗ್ ಬೈ ಡೂಯಿಂಗ್

**ಕೋಡ್ಸ್ :**

(A) I, III, II, IV

(B) III, II, I, IV

(C) II, IV, I, III

(D) I, II, III, IV

**29.** **Assertion (A)** : In regression equation, the right hand side variable is called the explained variable

**Reason (R)** : The explanatory variable explains the variation in the explained variable

**Codes :**

(A) Both (A) and (R) are incorrect

(B) (A) is incorrect, (R) is correct

(C) Both (A) and (R) are correct

(D) (R) is incorrect, (A) is correct

**30.** Identify the chronology of the following models of Duopoly

I. Cournot Model

II. Stackleberg Model

III. Bertrand Model

IV. Paul Sweezy Model

**Codes :**

(A) I, II. III, IV (B) IV, III, II, I

(C) III, I, IV, II (D) III, I, II, IV

**31.** When MC = AC, arrange the following costs in the ascending order of their magnitude

I. AVC

II. AC

III. AFC

**Codes :**

(A) III, I, II (B) I, II, III

(C) III, II, I (D) II, I, III

**32.** Sequentially arrange the process of interaction between multiplier and accelerator

(I) Increase in income through multiplier

(II) Increase in autonomous investment

(III) Increase in induced investment through accelerator

(IV) Increase in aggregate demand and income by larger amount

**Codes :**

(A) I, II, III, IV

(B) II, I, III, IV

(C) IV, III, II, I

(D) III, IV, I, II

**33.** Arrange the following contributions in chronological order using the codes given

(I) Inverted U shaped hypothesis of Simon Kuznets

(II) Theory of Economic growth of J. A. Schumpeter

(III) Golden rule of accumulation of E. S. Phelps

(IV) Learning by doing of K. J. Arrow

**Codes :**

(A) I, III, II, IV

(B) III, II, I, IV

(C) II, IV, I, III

(D) I, II, III, IV

34. ಕೆಳಗಿನ ದೇಶಗಳನ್ನು ಅವುಗಳ HDI 2013 ರಂತೆ ಸರಿಯಾದ ಸ್ಥಾನದಲ್ಲಿರಿಸಿರಿ

I. ಯುನೈಟೆಡ್ ಕಿಂಗ್‌ಡಮ್

II. ನಾರ್ವೆ

III. ಯುನೈಟೆಡ್ ಸ್ಟೇಟ್ಸ್

IV. ಭಾರತ

**ಕೋಡ್ಸ್ :**

(A) II, III, I, IV (B) I, II, III, IV

(C) II, III, IV, I (D) III, IV, II, I

35. ಕೇಂದ್ರೀಯ ಮುಂಗಡ ಪತ್ರ 2015-16 ರಂತೆ ಒಟ್ಟು ತೆರಿಗೆ ಆದಾಯಕ್ಕೆ ಕೊಡುಗೆ ನೀಡುವ ಕೆಳಗಿನ ತೆರಿಗೆಗಳನ್ನು ಮೇಲಿನಿಂದ ಕೆಳಗೆ ಎಂಬ ಕ್ರಮದಂತೆ ಗುರುತಿಸಿರಿ

I. ಕೇಂದ್ರೀಯ ಅಬಕಾರಿ

II. ಸೇವಾ ತೆರಿಗೆ

III. ಕಾರ್ಪೋರೇಷನ್ ತೆರಿಗೆ

IV. ಆದಾಯದ ಮೇಲಿನ ತೆರಿಗೆ

**ಕೋಡ್ಸ್ :**

(A) I, II, III, IV (B) IV, III, II, I

(C) III, II, IV, I (D) III, IV, I, II

36. ಭಾರತದಲ್ಲಿ ಜಾರಿಗೆ ಬಂದಂತೆ ಕೆಳಗಿನ ತೆರಿಗೆಗಳ ಕ್ರಮಾನುಗತವನ್ನು ಅಣಿಗೊಳಿಸಿರಿ

I. ಆದಾಯ ತೆರಿಗೆ

II. ವೆಚ್ಚ ತೆರಿಗೆ

III. ಮೋಟಾರು ವಾಹನ ತೆರಿಗೆ

IV. ಮನರಂಜನಾ ತೆರಿಗೆ

**ಕೋಡ್ಸ್ :**

(A) I, II, III, IV (B) IV, III, II, I

(C) I, III, IV, II (D) I, III, II, IV

37. ಅಂತರರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಕೆಳಗಿನ ಘಟನೆಗಳನ್ನು ಕ್ರಮಾನುಗತವಾಗಿ ಅಣಿಗೊಳಿಸಿರಿ

I. ಸ್ನೇಕ್ ಇನ್ ದ ಟನೆಲ್

II. ಟು-ಟೈರ್ ಗೋಲ್ಡ್ ಮಾರ್ಕೆಟ್

III. ಬ್ರೆಟನ್‌ವುಡ್ಸ್ ಸಮ್ಮೇಳನ

IV. ಡಾಲರ್‌ನ್ನು ಚಿನ್ನಕ್ಕೆ ಪರಿವರ್ತಿಸುವುದರ ರದ್ದತಿ

**ಕೋಡ್ಸ್ :**

(A) I, II, III, IV (B) III, II, IV, I

(C) III, II, I, IV (D) II, III, I, IV

38. ಈ ಕೆಳಗಿನ ಸರಾಸರಿಗಳನ್ನು ಋಣಾತ್ಮಕ ಚದುರಿದ ಹಂಚಿಕೆಯ ಪ್ರಮಾಣಕ್ಕೆ ತಕ್ಕಂತೆ ಕೆಳಗಿನಿಂದ ಮೇಲೆ ಎಂಬ ಕ್ರಮದಂತೆ ಅಣಿಗೊಳಿಸಿರಿ

I. ಅರಿತ್‌ಮೆಟಿಕ್ ಮೀನ್

II. ಮೀಡಿಯನ್

III. ಮೋಡ್

**ಕೋಡ್ಸ್ :**

(A) I, II, III (B) III, I, II

(C) II, III, I (D) III, II, I

ಕೆಳಗಿನ ಪ್ರಶ್ನೆಗಳನ್ನು ಓದಿ, ಎರಡು ಪಟ್ಟಿಗಳಿಂದ ಸರಿಯಾದ ಜೋಡಿಯನ್ನು ನೀಡಿದ ಕೋಡ್‌ಗಳ ಸಹಾಯದಿಂದ ಗುರುತಿಸಿರಿ :

39.

| | ಪಟ್ಟಿ I | | ಪಟ್ಟಿ II |
|---|---|---|---|
| a) | ಲಿಯಾನ್‌ವಾಲ್‌ರಾಸ್ | 1. | ಅಸಾಧ್ಯತೆಯ ಪ್ರಮೇಯ |
| b) | ಬೈನ್ಸ್, ಜೆ | 2. | ಸಾರ್ವತ್ರಿಕ ಸಮತೋಲನ |
| c) | ಮಾರಿಸ್. ಆರ್. | 3. | ಮಿತಿ ಬೆಲೆ ನಿಗದಿಪಡಿಸುವಿಕೆ |
| d) | ಕೆನೆತ್. ಜೆ. ಏರೋ | 4. | ಉದ್ಯಮ ನಿರ್ವಹಣಾ ಮಾದರಿ |

**ಕೋಡ್ಸ್ :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 4 | 3 | 2 | 1 |
| (C) | 2 | 3 | 4 | 1 |
| (D) | 1 | 2 | 4 | 3 |

**34.** Rank the following countries according to their HDI 2013

I. United Kingdom

II. Norway

III. United States

IV. India

**Codes :**

(A) II, III, I, IV (B) I, II, III, IV

(C) II, III, IV, I (D) III, IV, II, I

**35.** Identify the following taxes in the descending order of their contribution to the gross tax revenue in the Union Budget 2015-16

I. Union Excise Duties

II. Service Tax

III. Corporation Tax

IV. Taxes on Income

**Codes :**

(A) I, II, III, IV (B) IV, III, II, I

(C) III, II, IV, I (D) III, IV, I, II

**36.** Arrange the following taxes in chronological order of their introduction in India.

I. Income Tax

II. Expenditure Tax

III. Motor vehicles Tax

IV. Entertainment Tax

**Codes :**

(A) I, II, III, IV (B) IV, III, II, I

(C) I, III, IV, II (D) I, III, II, IV

**37.** Arrange the following events in the International Monetary system in chronological order

I. Snake in the Tunnel

II. Two-tier gold market

III. Brettonwoods conference

IV. Suspension of convertibility of dollar into gold

**Codes :**

(A) I, II, III, IV (B) III, II, IV, I

(C) III, II, I, IV (D) II, III, I, IV

**38.** Arrange the following averages in the ascending order of their magnitude in a negatively skewed distribution

I. Arithmetic mean

II. Median

III. Mode

**Codes :**

(A) I, II, III (B) III, I, II

(C) II, III, I (D) III, II, I

Read the following questions and match the correct pair from the List I and II. Use the codes given below for answering :

**39.**

| **List I** | **List II** |
|---|---|
| a) Leon Walras | 1. Impossibility theorem |
| b) Bains. J. | 2. General Equilibrium |
| c) Marris. R. | 3. Limit pricing |
| d) Kenneth J. Arrow | 4. Model of Managerial Enterprise |

**Codes :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 4 | 3 | 2 | 1 |
| (C) | 2 | 3 | 4 | 1 |
| (D) | 1 | 2 | 4 | 3 |

**40.** **ಪಟ್ಟಿ I** **ಪಟ್ಟಿ II**

a) ಮಾರ್ಷಲ್‌ರವರ ವಿಶ್ಲೇಷಣೆಯಲ್ಲಿ ಗ್ರಾಹಕರ ಸಮತೋಲನ — 1. $\frac{Mu_x}{P_x} = \frac{Mu_y}{P_y}$

b) ಔದಾಸೀನ್ಯ ರೇಖಾ ವಿಶ್ಲೇಷಣೆಯಲ್ಲಿ ಗ್ರಾಹಕರ ಸಮತೋಲನ — 2. $Mu_x = P_x$

c) ಉದ್ಯಮ ಘಟಕಗಳ ಸಮತೋಲನ — 3. $MRTS_{LK} = \frac{w}{r}$

d) ಸಮ–ಸೀಮಾಂತ ತುಷ್ಟಿಗುಣ — 4. $MRS_{xy} = \frac{P_x}{P_y}$

**ಕೋಡ್ಸ್ :**

| | a | b | c | d |
|---|---|---|---|---|
| (A) | 2 | 4 | 3 | 1 |
| (B) | 1 | 2 | 3 | 4 |
| (C) | 2 | 4 | 1 | 3 |
| (D) | 1 | 3 | 2 | 4 |

**41.** **ಪಟ್ಟಿ I** **ಪಟ್ಟಿ II**

a) $M_1$ — 1. C + DD + OD + ಬ್ಯಾಂಕ್‌ನ ಕಾಲ ಠೇವಣಿಗಳು

b) $M_2$ — 2. C + DD + OD

c) $M_3$ — 3. C + DD + OD + ಅಂಚೆ ಕಛೇರಿಗಳ ಉಳಿತಾಯ ಠೇವಣಿಗಳು

d) $M_4$ — 4. ಬ್ರಾಡ್ ಹಣ + ಅಂಚೆ ಕಛೇರಿಗಳ ಒಟ್ಟು ಠೇವಣಿಗಳು

**ಕೋಡ್ಸ್ :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 2 | 3 | 4 | 1 |
| (C) | 2 | 3 | 1 | 4 |
| (D) | 1 | 2 | 4 | 3 |

**42.** **ಪಟ್ಟಿ I** **ಪಟ್ಟಿ II**

a) ಬಂಡವಾಳ ಶಾಹಿಯ ಪತನ — 1. ಕಾರ್ಲ್ ಮಾರ್ಕ್ಸ್

b) ಬಂಡವಾಳ ಶಾಹಿಯ ಸ್ಥಾಗಿತ್ಯ ಕೊನೆ — 2. ರಾಲ್ ಪ್ರೆಬಿಶ್

c) ದೀರ್ಘಕಾಲ ಸ್ಥಗಿತ — 3. ಡೇವಿಡ್ ರಿಕಾರ್ಡೋ

d) ವ್ಯಾಪಾರದ ಕರಾರಿನ ದೀರ್ಘಕಾಲೀನ ಕ್ಷೀಣಿಸುವಿಕೆ — 4. ಹ್ಯಾನ್‌ಸೆನ್

**ಕೋಡ್ಸ್ :**

| | a | b | c | d |
|---|---|---|---|---|
| (A) | 1 | 3 | 4 | 2 |
| (B) | 1 | 2 | 3 | 4 |
| (C) | 1 | 3 | 2 | 4 |
| (D) | 4 | 3 | 1 | 2 |

**43.** **ಪಟ್ಟಿ I** **ಪಟ್ಟಿ II**

a) ಜೆ. ಎಂ. ಬುಚಾನನ್ — 1. ಸಂಯುಕ್ತ ಹಣಕಾಸು

b) ಫಿನ್‌ಡ್‌ಲೇ ಚಿರಾಸ್ — 2. ಅನುಚಲನ ಹಣಕಾಸು

c) ಆರ್. ಎನ್. ಭಾರ್ಗವ — 3. ಪಬ್ಲಿಕ್ ಚೋಯಿಸ್ ಥಿಯರಿ

d) ಎ. ಪಿ. ಲರ್ನರ್ — 4. ಸಾರ್ವಜನಿಕ ವೆಚ್ಚದ ಕನಾನ್‌ಗಳು

**ಕೋಡ್ಸ್ :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 3 | 4 | 1 | 2 |
| (C) | 3 | 4 | 2 | 1 |
| (D) | 1 | 2 | 4 | 3 |

**40.** **List I** — **List II**

a) Consumer equilibrium under Marshallian analysis — 1. $\frac{Mu_x}{P_x} = \frac{Mu_y}{P_y}$

b) Consumer Equilibrium under Indifference curve analysis — 2. $Mu_x = P_x$

c) Firms' equilibrium — 3. $MRTS_{LK} = \frac{w}{r}$

d) Equi-Marginal utility — 4. $MRS_{xy} = \frac{P_x}{P_y}$

**Codes :**

| | a | b | c | d |
|---|---|---|---|---|
| (A) | 2 | 4 | 3 | 1 |
| (B) | 1 | 2 | 3 | 4 |
| (C) | 2 | 4 | 1 | 3 |
| (D) | 1 | 3 | 2 | 4 |

**41.** **List I** — **List II**

a) $M_1$ — 1. C + DD + OD + Time Deposits with Banks

b) $M_2$ — 2. C + DD + OD

c) $M_3$ — 3. C + DD + OD + Savings Deposits with post offices

d) $M_4$ — 4. Broad Money + Total Post Offices Deposits

**Codes :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 2 | 3 | 4 | 1 |
| (C) | 2 | 3 | 1 | 4 |
| (D) | 1 | 2 | 4 | 3 |

**42.** **List I** — **List II**

a) Breakdown of Capitalism — 1. Karl Marx

b) Stationary end of Capitalism — 2. Raul Prebisch

c) Secular stagnation — 3. David Ricardo

d) Secular Deterioration of terms of Trade — 4. Hansen

**Codes :**

| | a | b | c | d |
|---|---|---|---|---|
| (A) | 1 | 3 | 4 | 2 |
| (B) | 1 | 2 | 3 | 4 |
| (C) | 1 | 3 | 2 | 4 |
| (D) | 4 | 3 | 1 | 2 |

**43.** **List I** — **List II**

a) J. M. Buchannan — 1. Federal Finance

b) Findlay Chirras — 2. Functional Finance

c) R. N. Bhargava — 3. Public Choice Theory

d) A. P. Lerner — 4. Cannons of Public Expenditure

**Codes :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 3 | 4 | 1 | 2 |
| (C) | 3 | 4 | 2 | 1 |
| (D) | 1 | 2 | 4 | 3 |

**44.** ಈ ಕೆಳಗಿನವುಗಳಲ್ಲಿ ಸುಂಕಗಳ ಪರಿಣಾಮದ ಕುರಿತಂತೆ ಯಾವ ಜೋಡಿ ಸರಿಯಾಗಿ ಹೊಂದುವುದಿಲ್ಲ ?

(A) ಅನುಭೋಗ – ಇಳಿಕೆಯಾಗುತ್ತದೆ

(B) ಉತ್ಪಾದನೆ – ಏರಿಕೆಯಾಗುತ್ತದೆ

(C) ವ್ಯಾಪಾರದ ಕರಾರುಗಳು – ಕ್ಷೀಣಿಸುತ್ತದೆ

(D) ಆದಾಯದ ಪುನರ್‌ಹಂಚಿಕೆ – ಕೊರತೆಯ ಉತ್ಪಾದನಾಂಗದ ಪರವಾಗಿದೆ

**45.**

| ಪಟ್ಟಿ I | ಪಟ್ಟಿ II |
|---|---|
| a) ಮಹತ್ವದ ಮಟ್ಟ | 1. $(1-\alpha)$ |
| b) ಧೈರ್ಯದ ಮಟ್ಟ | 2. $\beta$ |
| c) ಟೈಪ್ – II ಎರರ್ | 3. $\alpha$ |
| d) $R^2$ ನ ರೇಂಜ್ | 4. 0 ಯಿಂದ 1 |

**ಕೋಡ್ಸ್ :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 3 | 1 | 4 | 2 |
| (C) | 1 | 2 | 4 | 3 |
| (D) | 3 | 1 | 2 | 4 |

ಈ ಕೆಳಗಿನ ಪ್ಯಾರಾವನ್ನು ಓದಿ, ಪ್ರಶ್ನೆ **46** ರಿಂದ **50** ರವರೆಗೆ ಉತ್ತರಿಸಿರಿ :

**ಭಾರತದ ಅರ್ಥ ವ್ಯವಸ್ಥೆ - ಒಂದು ನೋಟ**

ಆರ್ಥಿಕ ಸಾಧನೆಗೆ ಸಂಬಂಧಿಸಿದಂತೆ, 2014 –15 ನೇ ಸಾಲಿಗೆ ಸಂಬಂಧಿಸಿದಂತೆ, ಇತರ ದೇಶಗಳಿಗೆ ಹೋಲಿಸಿದಾಗ ಅನೇಕ ಮುಂದುವರಿದ ಮತ್ತು ಹೊರಹೊಮ್ಮುತ್ತಿರುವ ರಾಷ್ಟ್ರಗಳು (ಅರ್ಥ ವ್ಯವಸ್ಥೆಗಳು) ನಿರಾಶಾವಾದವನ್ನು ಮತ್ತು ಅನಿಶ್ಚಿತತೆಗಳನ್ನು ಹೊಂದಿದ್ದರೂ ಭಾರತವು ಉತ್ತಮ ಆರ್ಥಿಕ ಹೊರನೋಟಗಳನ್ನು ಹೊಂದಿರುವುದು ಒಂದು ಉತ್ತಮ ಲಕ್ಷಣವಾಗಿ ಕಾಣುತ್ತಿದೆ. 2011–12 ನೇ ಸಾಲು ಮತ್ತು 2012–13 ನೇ ಸಾಲುಗಳಲ್ಲಿದ್ದ ಹಣದ ಮೌಲ್ಯದ ಡೋಲಾಯಮಾನ ಸ್ಥಿತಿ, ಆರ್ಥಿಕ ಕುಂಟಿತತೆ, ಹಣದುಬ್ಬರ, ಹೆಚ್ಚಾದ ವಿತ್ತೀಯ ಕೊರತೆ, ಆಂತರಿಕ ಬೇಡಿಕೆಯಲ್ಲಿನ ಇಳಿಕೆ, ಬಾಹ್ಯಖಾತೆಯ ಅಸಂತುಲನೆ ಮುಂತಾದ ಸಮಸ್ಯೆಗಳ ಸುಳಿಯಿಂದ ಹೊರಬರುತ್ತಿರುವುದು (ಭಾಗಶಃ ಬಂದಿರುವುದು) ಭಾರತಕ್ಕೆ ಚೇತೋಹಾರಿ ಭವಿಷ್ಯವಿರುವುದನ್ನು ತೋರಿಸುತ್ತದೆ. ಆದರೆ ಸಮಗ್ರ ಆರ್ಥಿಕ ದೃಷ್ಟಿಯಿಂದ ಹೇಳುವುದಾದರೆ ಕಳಪೆ ಸ್ಥಿತಿ ಎಂಬುದು ನಮ್ಮ ಹಿಂದೆಯೇ ಸ್ಪಷ್ಟವಾಗಿ ಇದೆ ಎನ್ನಬಹುದು. ಕೇಂದ್ರೀಯ ಸಾಂಖ್ಯಿಕ ಕಛೇರಿಯು ರಾಷ್ಟ್ರೀಯ ಆದಾಯದ ಅಂದಾಜಿನ ಕುರಿತಾಗಿ ಇತ್ತೀಚೆಗೆ ಮಾಡಿದ ಅಂದಾಜು ಸೂಚಕಗಳ ಪ್ರಕಾರ 2013-14ರಲ್ಲಿ ಪುನಶ್ಚೇತನಗೊಂಡ ಬೆಳವಣಿಗೆಯು2014-15 ರಲ್ಲಿ ಮುಂದಕ್ಕೆ ಸಾಗುತ್ತಿದೆ. ತೈಲದ ಬೆಲೆಗಳಲ್ಲಿನ ತೀವ್ರ ಇಳಿಕೆ, ಜಗತ್ತಿನ ಇತರ ರಾಷ್ಟ್ರಗಳಿಂದ ಹರಿದು ಬರುತ್ತಿರುವ ನಿಧಿಗಳು, ಕೇಂದ್ರದ ನೂತನ ಸರಕಾರದ ಸುಧಾರಣಾ ಕ್ರಮಗಳ ಸಂಭಾವ್ಯ ಪರಿಣಾಮ ಮತ್ತು ವಿತ್ತೀಯ ನಿರ್ವಹಣೆ ಹಾಗೂ ಕ್ರೋಡೀಕರಣಕ್ಕೆ ಸಂಬಂಧಪಟ್ಟಂತೆ ಅದರ ಬದ್ಧತೆ ಮುಂತಾದ ಅಂಶಗಳು ಸಮಗ್ರ ಆರ್ಥಿಕ ಸನ್ನಿವೇಶ ಮತ್ತು ಬೆಳವಣಿಗೆ ಸೂಚನೆಗಳಿಗೆ ಇಂಬು ನೀಡುತ್ತಿವೆ ಎನ್ನಬಹುದು. ಹೆಚ್ಚಿನ ಮಟ್ಟದ ಸಮಗ್ರ ಆರ್ಥಿಕ ಸ್ಥಿರತೆ, ಸುಧಾರಣೆಗಳ ಕಡೆಗಿನ ಒಲವು, ದೇಶದಲ್ಲಿ ಸುಧಾರಿತ ವ್ಯಾಪಾರಿ ಸಂವೇದನೆಗಳು ಮುಂತಾದವುಗಳನ್ನು ಗಮನಿಸಿ ಭಾರತಕ್ಕೆ ಸಂಬಂಧಪಟ್ಟಂತೆ ಅಂತರಾಷ್ಟ್ರೀಯ ಹಣಕಾಸು ನಿಧಿ ಮತ್ತು ಜಾಗತಿಕ ಬ್ಯಾಂಕು ಎರಡೂ 2015 ನೇ ವರ್ಷ ಮತ್ತು ಅದರಾಚೆಗೂ ಆಶಾದಾಯಕ ಹೊರನೋಟವನ್ನು ಸಾದರಪಡಿಸಿವೆ. ಆಶಾದಾಯಕ ಭವಿಷ್ಯವಿದ್ದರೂ ಜಾಗತಿಕ ಅರ್ಥವ್ಯವಸ್ಥೆಯ ಅಸಮರ್ಪಕ ಬೆಂಬಲ, ಯುರೋಪ್, ಜಪಾನ್ ಮುಂತಾದ ದೇಶಗಳಲ್ಲಿರುವ ಅದುಮಿದ ಬೇಡಿಕೆ, ಇತ್ತೀಚೆಗಿನ ಚೀನಾ ದೇಶದ ಆರ್ಥಿಕ ಕುಂಟಿತತೆ ಮುಂತಾದ ಅಂಶಗಳು ಭಾರತವನ್ನು ಚಿಂತಿಸುವಂತೆ ಮಾಡಿವೆ. ಆಂತರಿಕವಾಗಿ ಸಾಮಾನ್ಯಕ್ಕಿಂತ ಕಡಿಮೆ ಮಟ್ಟದ ಕೃಷಿ ಬೆಳವಣಿಗೆ, ಹೇರಳವಾಗಿ (ವಿಪುಲವಾಗಿ) ಕೌಶಲ್ಯಗಳ ಸೃಷ್ಟಿ

**44.** Which of the following pairs of effects of tariffs is not correctly matched ?

(A) Consumption – Falls

(B) Production – Rises

(C) Terms of Trade – Deteriorate

(D) Income Redistribution – Favours scarce factor

**45.**

| | List I | | List II |
|---|---|---|---|
| a) | Level of significance | 1. | $(1-\alpha)$ |
| b) | Level of confidence | 2. | $\beta$ |
| c) | Type-II Error | 3. | $\alpha$ |
| d) | Range of $R^2$ | 4. | 0 to 1 |

**Codes :**

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 3 | 1 | 4 | 2 |
| (C) | 1 | 2 | 4 | 3 |
| (D) | 3 | 1 | 2 | 4 |

Read the following paragraph carefully and answer the questions from **46** to **50**

**Indian Economy – An overview**

One of the redeeming features, while comparing economic performance across different countries for the year 2014-15, has been the emergence of India among the few large economies with propitious economic outlook, amidst the mood of pessimism and uncertainties that engulf a number of advanced and emerging economies. Brighter prospects in India owe mainly to the fact that the economy stands largely relieved of the vulnerabilities associated with an economic slowdown, persistent inflation, elevated fiscal deficit, slackening domestic demand, external account imbalances, and oscillating value of the rupee in 2011-12 and 2012-13. From the macroeconomic perspective, the worst is clearly behind us. The latest indicators, emerging from the recently revised estimates of national income brought out by the Central Statistics Office, point to the fact that the revival of growth had started in 2013-14 and attained further vigour in 2014-15. Factors like the steep decline in oil prices, plentiful flow of funds from the rest of the world, and potential impact of the reform initiatives of the new government at the centre along with its commitment to calibrated fiscal management and consolidation bode well for the growth prospects and the overall macroeconomic situation. Encouraged by the greater macro-economic stability and the reformist intent and actions of the government, coupled with improved business sentiments in the country, institutions like the IMF and the World Bank have presented an optimistic growth outlook for India for the year 2015 and beyond. The possible headwinds to such promising prospects, however, emanate from factors like inadequate support from the global economy saddled with subdued demand conditions, particularly in Europe and Japan, recent slowdown in China and on the domestic front, from possible spill-overs of below normal agricultural growth and challenges relating to the massive requirements of skill creation and infrastructural upgradation. The encouraging

ಮತ್ತು ಮೂಲಭೂತ ಸವಲತ್ತುಗಳ ಮೇಲ್ದರ್ಜೆಗೇರಿಸುವಿಕೆ ಮುಂತಾದವುಗಳು ಸವಾಲಾಗಿವೆ. 2014-15 ಕ್ಕೆ ಸಂಬಂಧಿಸಿದಂತೆ ಇತ್ತೀಚೆಗಿನ ಅಂದಾಜುಗಳ ಫಲಿತಾಂಶಗಳು ಪ್ರೋತ್ಸಾಹದಾಯಕವಾಗಿದ್ದು, ಜಾಗತಿಕ ಹಿಂಜರಿತ, ವಿದೇಶಿ ವ್ಯಾಪಾರ ಕ್ಷೇತ್ರದ ತೊಂದರೆ ಇತ್ಯಾದಿಗಳಿದ್ದರೂ, ಬಲವಾದ ಆಂತರಿಕ ಬೇಡಿಕೆಯು ಇವುಗಳನ್ನು ಹಿಮ್ಮೆಟ್ಟಿಸಿ ಬೆಳವಣಿಗೆಯು ಮುಂದೆ ಸಾಗುವಂತೆ ಮಾಡಬಹುದು ಎಂದು ಅಂದಾಜುಗಳಿಂದ ತಿಳಿಯಬಹುದು.

**46.** 2014-15 ಕ್ಕಿಂತ ಹಿಂದಿನ ಅವಧಿಗೆ ಸಂಬಂಧಿಸಿದಂತೆ ನಿರಾಶಾವಾದ ಮತ್ತು ಅನಿಶ್ಚಿತತೆಗಳಿಗೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಕಾರಣವಲ್ಲ?

(A) ಜನಸಂಖ್ಯೀಯ ಪ್ರತಿಫಲ

(B) ನಿರಂತರ ಹಣದುಬ್ಬರ

(C) ಆಂತರಿಕ ಬೇಡಿಕೆಯ ಕುಂಟಿತತೆ

(D) ವಿತ್ತೀಯ ಕೊರತೆ

**47.** ಸಮಗ್ರ ದೃಷ್ಟಿಯಿಂದ ಬೆಳವಣಿಗೆಯ ಪುನಶ್ಚೇತನ ಮತ್ತು ಅದರ ಸಾಧನೆ ಯಾವುದರಿಂದ ಎಂದರೆ

I. ತೈಲ ಬೆಲೆಗಳಲ್ಲಿ ತೀವ್ರ ಇಳಿಕೆ

II. ಸರಕಾರದ ಹೊಸಕ್ರಮಗಳ ಆರಂಭ

III. ವಿತ್ತೀಯ ನೀತಿ ನಿರ್ವಹಣೆ

IV. ಕೃಷಿಯ ಸದ್ಯದ ಸ್ಥಿತಿ

**ಕೋಡ್ಸ್:**

(A) I ಮತ್ತು II ಮಾತ್ರ

(B) I ಮತ್ತು III ಮಾತ್ರ

(C) I, II ಮತ್ತು III ಮಾತ್ರ

(D) II, III ಮತ್ತು IV ಮಾತ್ರ

**48.** **ಪ್ರತಿಪಾದನೆ (A)** : ಅಂತರರಾಷ್ಟ್ರೀಯ ಹಣಕಾಸು ನಿಧಿ ಮತ್ತು ಜಾಗತಿಕ ಬ್ಯಾಂಕ್ ಭಾರತಕ್ಕೆ ಸಂಬಂಧಿಸಿದಂತೆ 2015 ರ ನಂತರಕ್ಕೂ ಆಶಾದಾಯಕ ಬೆಳವಣಿಗೆಯ ಹೊರನೋಟವನ್ನು ಸಾದರಪಡಿಸಿವೆ.

**ಕಾರಣ (R)** : ಭಾರತವು ಸಮಗ್ರ ಆರ್ಥಿಕ ಸ್ಥಿರತೆಯನ್ನು ಸಾಧಿಸಿದೆ, ದೇಶದಲ್ಲಿ ವ್ಯಾಪಾರಿ ಸಂವೇದನೆಯನ್ನು ಸುಧಾರಿಸಲು ಅನೇಕ ಸುಧಾರಣಾಕ್ರಮಗಳನ್ನು ಆರಂಭಿಸಿದೆ.

**ಕೋಡ್ಸ್ :**

(A) (A) ಮತ್ತು (R) ಗಳೆರಡೂ ಸರಿ, (R) (A) ಯ ಸರಿಯಾದ ವಿವರಣೆಯಾಗಿರುತ್ತದೆ

(B) (A) ಮತ್ತು (R) ಗಳೆರಡೂ ಸರಿಯಲ್ಲ

(C) (A) ಯು ಸರಿ, (R) ಸರಿಯಲ್ಲ

(D) (A) ಯು ಸರಿಯಲ್ಲ, (R) ಸರಿ

**49.** ಭಾರತಕ್ಕೆ ಉಜ್ವಲ ಭವಿಷ್ಯವಿರುವುದು ಯಾವ ಸಮಸ್ಯೆಯನ್ನು ಹತ್ತಿಕ್ಕುವುದರಿಂದ ಎಂದರೆ

I. ಆರ್ಥಿಕ ಹಿಂಜರಿತ

II. ನಿರಂತರ ಹಣದುಬ್ಬರ

III. ಹೆಚ್ಚಿದ ವಿತ್ತೀಯ ಕೊರತೆ

IV. ಬಾಹ್ಯ ಖಾತೆ ಅಸಂತುಲನೆ

**ಕೋಡ್ಸ್:**

(A) I ಮತ್ತು II ಮಾತ್ರ

(B) II ಮತ್ತು III ಮಾತ್ರ

(C) III ಮತ್ತು IV ಮಾತ್ರ

(D) I, II, III ಮತ್ತು IV

**50.** ಜಾಗತಿಕ ಹಿಂಜರಿತದ ಪರಿಣಾಮವು ಭಾರತದ ಯಾವುದರ ಮೇಲೆ ಇದೆ ಎಂದರೆ

(A) ಕೃಷಿ ವಲಯ (B) ಕೈಗಾರಿಕಾ ವಲಯ

(C) ವಿದೇಶಿ ಬೇಡಿಕೆ (D) ಆಂತರಿಕ ಬೇಡಿಕೆ

results from the Advance Estimates for 2014-15 suggest that though the global sluggishness has partly fed into the lacklustre growth in foreign trade ; yet this downward pressure has been compensated by strong domestic demand, keeping the growth momentum going.

**46.** Which of the following is not an appropriate reason for pessimism and uncertainty prior to the year 2014-15 ?

(A) Demographic Dividend

(B) Persistent Inflation

(C) Slackening Domestic Demand

(D) Fiscal Deficit

**47.** From the macro point of view the revival of growth and its further attainment are due to

I. Steep reduction in oil prices

II. New initiatives by the government

III. Calibrated fiscal policy management

IV. Current status of agriculture

**Codes :**

(A) I and II only

(B) I and III only

(C) I, II and III only

(D) II, III and IV only

**48.** **Assertion (A)** : The IMF and World Bank have presented an optimistic growth outlook for India from 2015 and beyond

**Reason (R)** : India achieved macro economic stability, initiated several reforms to improve the business sentiments in the country

**Codes :**

(A) Both (A) and (R) are correct, (R) is the correct explanation of (A)

(B) Both (A) and (R) are incorrect

(C) (A) is correct, (R) is incorrect

(D) (A) is incorrect, (R) is correct

**49.** Brighter prospects in India might be due to overcoming the problems of

I. Economic slowdown

II. Persistent inflation

III. High fiscal deficit

IV. External account imbalance

**Codes :**

(A) I and II only (B) II and III only

(C) III and IV only (D) I, II, III and IV

**50.** The global slowdown has an impact on India's

(A) Agricultural sector

(B) Industrial sector

(C) Foreign demand

(D) Domestic demand

ಚಿತ್ತು ಬರಹಕ್ಕಾಗಿ ಸ್ಥಳ

Space for Rough Work